**ಸಿಸಿ ಃ 27/2024**

**ಚಾಸಾ –2**

**ಪ್ರಾಸಾ –2**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**

**ಸಿಸಿ ಃ 27/2024**

ಸಾಕ್ಷಿದಾರರ ಹೆಸರುಃ ವಿಶ್ವನಾಥ
ತಂದೆ/ಗಂಡ ಹೆಸರುಃ ವೀರಪ್ಪ
ವಯಸ್ಸುಃ **60**
ವೃತ್ತಿಃ ಕೂಲಿ
ವಾಸಸ್ಥಳಃ ಗರಗಂದೂರು ಗ್ರಾಮ ಸೋಮವಾರಪೇಟೆ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **14-03-2025**

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನನಗೆ ಚಾಸಾ **3** ರವರ ಪರಿಚಯವಿದೆ. ಮತ್ತು ಆರೋಪಿಯ ಪರಿಚಯ ನನಗೆ ಇದೆ. ಮಹಜರ್ ನಲ್ಲಿರುವ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ **3** ಬಿ ಎಂದು, ಲಿಸ್ಟ ಆಫ್ ಆರ್ಟಿಕಲ್ ನಲ್ಲಿರುವ ಸಹಿಯನ್ನು ನಿಪಿ **4** ಬಿ ಎಂದು, ಮಾದರಿ ಮೊಹರಿನಲ್ಲಿರುವ ಸಹಿಯ್ನು ನಿಪಿ **5** ಬಿ ಎಂದು, ಶೋಧನಾ ವಾರೆಂಟ್ ನಲ್ಲಿರುವ ಸಹಿಯನ್ನು ನಿಪಿ **10** ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನಾನು ಯಾವುದೇ ಹೇಳಿಕೆ ನೀಡಿಲ್ಲ.

**(ಸಾಕ್ಷಿಯು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುತ್ತಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟಿ ಸವಾಲು ನಡೆಸಲು ಅನುಮತಿ ಕೋರಿರುತ್ತಾರೆ. ಅನುಮತಿಸಿದೆ.)**

**ಪಾಟಿ ಸವಾಲುಃ ಎಪಿಪಿಯವರಿಂದ**

ದಿಃ **16-08-2023** ರಂದು ಸಂಜೆ **7.315** ಗಂಟೆಗೆ ಗರಗಂದೂರು ಬಿ ಗ್ರಾಮದ ರಸ್ತೆಯ ಬಳಿಯಿಂದ ನನ್ನನ್ನು ಮತ್ತು ಚಾಸಾ **3** ರವರ ಬಳಿ ಅಬಕಾರಿ ಅಧಿಕಾರಿಗಳು ಬಂದು ಈ ಪ್ರಕರಣದ ವಿಚಾರ ತಿಳಿಸಿ ಶೋಧನಾ ಸಮಯದಲ್ಲಿ

**ಸಿಸಿ ಃ 27/2024**
**ಚಾಸಾ –2**
**ಪ್ರಾಸಾ –2**

ಪಂಚರಾಗಿ ಬರಲು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ನಂತರ ಸದರಿ ಅಧಿಕಾರಿಗಳೊಂದಿಗೆ ಗರಗಂದೂರು ಬಿ ಗ್ರಾಮದ ಆರೋಪಿಯ ಮನೆಯ ಬಳಿ ಹೋದಾಗ ಮನೆಯ ಒಳಗೆ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ಕೇಳಲಾಗಿ ಎನ್.ಸಿ.ದಾಮೋದರ್ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ವ್ಯಕ್ತಿಗೆ ಅಧಿಕಾರಿಗಳು ಬಂದ ವಿಷಯ ತಿಳಿಸಿ ತಾವು ಅಕ್ರಮ ಮದ್ಯ ಹೊಂದಿರುವ ಬಗ್ಗೆ ಮನೆ ಶೋಧನೆ ಮಾಡಬೇಕೆಂದು ತಿಳಿಸಿ ನಿಪಿ **10** ರಂತೆ ಶೋಧನಾ ವಾರೆಂಟ್ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಆರೋಪಿಯ ಮನೆಯನ್ನು ನಮ್ಮ ಸಮಕ್ಷಮ ಪರಿಶೀಲನೆ ಮಾಡಿದಾಗ ಮನೆಯ ಒಳಗಡೆ ಹಾಲಿನ ಒಂದು ಬದಿಯಲ್ಲಿ **3** ಪ್ಲಾಸ್ಟಿಕ್ ಚೀಲಗಳಲ್ಲಿ ಮದ್ಯ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮದ್ಯ ತುಂಬಿರುವ ಪ್ಲಾಸ್ಟಿಕ್ ಚೀಲಗಳಿಗೆ ಕ್ರಮವಾಗಿ **1** ರಿಂದ **3** ಎಂದು ನಂಬರ್ ನೀಡಲಾಯಿತು ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ **1** ರ ಚೀಲದಲ್ಲಿದ್ದ ಮದ್ಯವನ್ನು ಎಣಿಸಿ ನೋಡಲಾಗಿ ಅದರಲ್ಲಿ **180** ಮಿಲಿಯ **79** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ಇಂಡಿಯನ್ ಬ್ರಾಂಡಿ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇದ್ದವು ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ **2** ರ ಚೀಲದಲ್ಲಿದ್ದ ಮದ್ಯವನ್ನು ಎಣಿಸಿ ನೋಡಲಾಗಿ ಅದರಲ್ಲಿ **90** ಮಿಲಿಯ **200** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ಇಂಡಿಯನ್ ಬ್ರಾಂಡಿ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇದ್ದವು ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ **3** ರ ಚೀಲದಲ್ಲಿದ್ದ ಮದ್ಯವನ್ನು ಎಣಿಸಿ ನೋಡಲಾಗಿ ಅದರಲ್ಲಿ **90** ಮಿಲಿಯ **165** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ಇಂಡಿಯನ್ ಬ್ರಾಂಡಿ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇದ್ದವು ಎಂದರೆ ಸರಿಯಲ್ಲ. ಸ್ಥಳದಲ್ಲಿ ಆರೋಪಿಯನ್ನು ಮದ್ಯವನ್ನು ಇಟ್ಟುಕೊಳ್ಳಲು ರಹದಾರಿ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ **3** ಚೀಲಗಳಿಂದ ತಲಾ **10** ರಂತೆ ಟೆಟ್ರಾ ಪ್ಯಾಕೇಟ್ ಗಳನ್ನು ರಸಾಯನಿಕ ವಿಶ್ಲೇಷಣೆಗೆ ಮಾದರಿಗಾಗಿ ತೆಗೆಯಲಾಯಿತು ಎಂದರೆ ಸರಿಯಲ್ಲ. ನಂತರ ನಿಪಿ **5**

ರಂತೆ ಮಾದರಿ ಮೊಹರು ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಟೆಟ್ರಾ ಪ್ಯಾಕ್ ಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ, ಅರಗಿಂದ ಸೀಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಿಪಿ 3 ರಂತೆ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 11 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟಿ ಸವಾಲುಃ ಕೆ.ಎಸ್.ಪಿ ವಕೀಲರಿಂದ

**ಇಲ್ಲ.**

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ).

ಸಹಿ/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**